ಪ್ರ. ಸಂ. ೨೫೩ (೪೮೨)

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಭಾರತರತ್ನ ಕಾಮರಾಜ್‌ರವರು ರಾಷ್ಟ್ರನಾಯಕರಾಗಿದ್ದರು. ಅವರ ವಿಚಾರದಲ್ಲಿ ಶ್ರೀಮಾನ್ ದೇವರಾಜ್ ಅರಸರು ಅವರು ಮುಖ್ಯಮಂತ್ರಿಗಳಾಗಿದ್ದಾಗ ರಸ್ತೆ ಒಂದಕ್ಕೆ ಕಾಮರಾಜ್‌ರವರ ಹೆಸರಿನ್ನಿಟ್ಟಿದ್ದರು. ಮೊನ್ನೆ ತಾನೆ ಕೇಂದ್ರ ಸರ್ಕಾರದವರು ಅವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿಸಿದ್ದಾರೆ. ಅದನ್ನು ಸ್ವತಃ ಪ್ರಧಾನಮಂತ್ರಿಯವರೇ ಉದ್ಘಾಟನೆ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರವೇ ಮುಂದೆ ಬಂದು ಪ್ರತಿಮೆ ಸ್ಥಾಪನೆ ಮಾಡಬೇಕಾಗಿತ್ತು. ಎಲ್ಲಾ ಪಕ್ಷಗಳವರು ಮುಂದೆ ಬಂದು ನಮಗೆ ಜಾಗ ಕೊಡಿ ನಾವೇ ಮಾಡುತ್ತೇವೆಂದು ಹೇಳಿದಾಗ ಬೆಂಗಳೂರು ನಗರ ಸಭೆಯವರು ಇದಕ್ಕೆ ಅನುಮತಿ ಕೊಟ್ಟಿಲ್ಲ. ದಯವಿಟ್ಟು ಆದಷ್ಟು ಬೇಗನೆ ಸರ್ಕಾರದಿಂದ ಈ ಪ್ರತಿಮೆಯನ್ನು ಇಟ್ಟರೆ ಒಳ್ಳೆಯದು ಅಥವಾ ಸರ್ವಪಕ್ಷದಿಂದ ಈ ಪ್ರತಿಮೆಯನ್ನು ಇಡುವ ಕೆಲಸ ಮಾಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಮಹಾನಗರ ಪಾಲಿಕೆಯವರನ್ನು ಅವರು ಈ ಕೆಲಸಕ್ಕೆ ಕೇಳಿದ್ದಾರೆ. ಅವರು ನಿರ್ಣಯ ಮಾಡಲಿ, ಅವರು ಆಗುವುದಿಲ್ಲ ಎಂದ ಮೇಲೆ ಮುಂದೆ ಏನು ಮಾಡಬೇಕೆಂದು ಹೇಳಿದ್ದೀರಿ, ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಕಾರ್ಪೊರೇಷನ್‌ನವರು ರಾಜಕೀಯ ಮಾಡಿ ತಡ ಮಾಡುತ್ತಿದ್ದಾರೆ ಅವರು ಜನತಾ ಪಕ್ಷದ ಹಾಗೂ ಕಾಂಗ್ರೆಸ್ ಪಕ್ಷದ ನಾಯಕರು ಆಗಿದ್ದರು ಈಗ ಏತಕ್ಕೆ ರಾಜಕೀಯ ತರುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು

ಶ್ರೀ ಎ. ಲಕ್ಷ್ಮೀಸಾಗರ್.—ರಾಜಕೀಯ ಪ್ರಶ್ನೆ ಇದರಲ್ಲಿ ಇಲ್ಲ. ಇದಕ್ಕೆ ಕೆಲವರು ಆರ್ಜಿಯನ್ನು ಹಾಕಿದ್ದಾರೆ. ಈ ನಿಮ್ಮ ಸಮಿತಿ ರಿಜಿಸ್ಟರು ಆಗಿದೆಯೋ, ಇಲ್ಲವೋ ಎಂದು ಕೇಳಿದ್ದಾರೆ, ಮೊದಲು ಅವನ್ನು ಕೊಟ್ಟಿರಲಿಲ್ಲ. ಈಗ ರಿಜಿಸ್ಟರ್ ಮಾಡಿ ಕೊಂಡಿರುವುದು ಕೊಟ್ಟಿದ್ದಾರೆ, ಅವರು ಮಾಡದೇ ಇದ್ದರೆ, ಮುಂದೆ ಹೇಗೆ ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡೋಣ.

ಪಿರಿಯಾ ಪಟ್ಟಣದಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ

೭೭೮. ಶ್ರೀ ಕೆ. ವೆಂಕಟೇಶ್(ಪಿರಿಯಾ ಪಟ್ಟಣ)—.ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಸುವರೇ ?

ಅ) ಪಿರಿಯಾ ಪಟ್ಟಣ ಟೌನಿನಲ್ಲಿ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ನೀಗಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಗಮನಾರ್ಹವಾದ ತೊಂದರೆ ಕಂಡು ಬಂದಿಲ್ಲ.

ಆ) ೨೦ ಲಕ್ಷರೂ.ಗಳ ಅಂದಾಜು ವೆಚ್ಚದ ನೀರು ಸರಬರಾಜು ಸುಧಾರಣಾ ಯೋಜನೆಯೊಂದನ್ನು ನಿಯೋಜಿಸಿದ್ದು, ಇದರ ಅಂದಾಜು ವೆಚ್ಚ ಪಟ್ಟಿ ಹಾಗೂ ನಕ್ಷೆಗಳು ತಯಾರಿಕಾ ಹಂತದಲ್ಲಿದ್ದು. ಈ ಯೋಜನೆಯನ್ನು ೭ನೇ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲಾಗಿದೆ.

ಶ್ರೀ ಕೆ. ವೆಂಕಟೇಶ.—ಮಾನ್ಯ ಸಚಿವರು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದಾಜು ವೆಚ್ಚ ತಯಾರಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಹೊಸ ಯೋಜನೆಯಲ್ಲಿ ಇದು ಯಾವಾಗ ಆಗುತ್ತದೆ ಎಂದು ನಿರ್ದಿಷ್ಟವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎ.ಲಕ್ಷ್ಮೀಸಾಗರ್.—೭ನೇ ಪಂಚವಾರ್ಷಿಕ ಯೋಜನೆಯಲ್ಲಿ ತುರಿಯಾ ಪಟ್ಟಣದ ನೀರು ಸರಬರಾಜು ಯೋಜನೆಯನ್ನು ಸೇರಿಸಲಿಕ್ಕೆ ಸಂಬಂಧಪಟ್ಟ ದಾಖಲೆಗಳು, ನಕ್ಷೆಗಳು, ತಯಾರಾಗುತ್ತಿದೆ. ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಬಳ್ಳಾರಿ ನಗರದ ೨ನೇ ಘಟ್ಟದ ನೀರು ಸರಬರಾಜು ಯೋಜನೆ

೫೬೭. **ಶ್ರೀ ಎಂ. ರಾಮಪ್ಪ** (ಬಳ್ಳಾರಿ) —.ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ನಗರದ ನೀರು ಸರಬರಾಜು ಯೋಜನೆಯ ಎರಡನೇ ಹಂತಕ್ಕೆ ಮಂಜೂರಾದ ಒಟ್ಟು ಹಣ ಮತ್ತು ಈ ಕೆಲಸಕ್ಕಾಗಿ ಒದಗಿಸಲಾದ ಹಣ ?

ಆ) ಈ ಯೋಜನೆಯ ಕೆಲಸಗಳನ್ನು ಪ್ರಸಕ್ತ ವರ್ಷದಲ್ಲಿ ಮುಗಿಸಲಾಗುವುದೇ ಇಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ, ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಮಂಜೂರಾದ ಅಂದಾಜು ಪಟ್ಟಿ ೬೪೨.೦೦ಲಕ್ಷರೂ. ಈವರೆಗೆ ಒದಗಿಸಲಾದ ಹಣ೨೧೧.೮೮ ಲಕ್ಷರೂಗಳು.

ಆ) ಇಲ್ಲ

ಕಾರಣಗಳು:—ಈ ಕೆಳಕಂಡಂತಿದೆ.

೧ ಕಚ್ಚಾ ನೀರು ಗುರುತ್ವಾಕರ್ಷಣ ಕೊಳವೆ ಮಾರ್ಗ ಮತ್ತು ಶುದ್ಧೀಕರಣ ಘಟಕಗಳಿಗೆ ಬೇಕಾಗುವ ಭೂಸ್ವಾಧೀನವು ಡಿಸೆಂಬರ್ ೮೬ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮಂತ್ತು ಒಳಚರಂಡಿ ಮಂಡಳಿಗೆ ದೊರಕಿತು.

೨ ವಾಯು ಪಡೆಯವರು ಒಡ್ಡಿದ ಸಮಸ್ಯೆಗಳು ಮತ್ತು ಆಡಚಣೆಗಳಿಂದಾಗಿ ಗುರುತ್ವಾಕರ್ಷಣ ಕೊಳವೆ ಮಾರ್ಗದ ಪಥವನ್ನು ಬದಲಾಯಿಸಬೇಕಾಗಿ ಬಂತು.

೩ ಗುರುತ್ವಾಕರ್ಷಣ ಕೊಳವೆ ಮಾರ್ಗವು ಎರಡು ರೈಲ್ವೆ ಮಾರ್ಗಗಳನ್ನು ದಾಟಬೇಕಾಗುತ್ತದೆ. ಅದ್ದರಿಂದ ಈ ಬಗ್ಗೆ ರೈಲ್ವೆ ಅಧಿಕಾರಿಗಳಿಂದ ಅನುಮತಿ ಪಡೆಯಬೇಕಾಗಿದೆ.

೪ ತುಂಗಭದ್ರಾ ಕಾಲುವೆಯನ್ನು ಮುಚ್ಚಿದ ಅವಧಿಯಲ್ಲಿ ಬೇಕಾಗುವ ನೀರನ್ನು ಶೇಖರಿಸಲು ಉಪಯೋಗಿಸಲು ಉದ್ದೇಶಿಸಲಾದ ಅಲ್ಲಿ ಪುರಕೆರೆಯ ಸ್ವಾಧೀನವು ಸಣ್ಣ ನೀರಾವರಿ ಇಲಾಖೆ ಇಂದ ಇನ್ನು ಮಂಡಲಿಗೆ ದೊರಕಿರುವುದಿಲ್ಲ.

೫ ಅಗತ್ಯವಾದ ಹಣ

(ಶ್ರೀ ಎಂ. ರಾಮಪ್ಪನವರ ಪರವಾಗಿ ಶ್ರೀ ಬಿ. ಸ್ವಾಮಿರಾವ್ ಅವರು ಕೇಳಿದರು)

ಶ್ರೀ ಬಿ. ಸ್ವಾಮಿರಾವ್.—ಗುರುತ್ವಾಕರ್ಷಣೆ ಕೊಳವೆ ಮಾರ್ಗ ಎಂದರೆ ಏನು ನನಗೆ ಅರ್ಥವಾಗಲಿಲ್ಲ. ಇನ್ನು ೫ನೇ ಉತ್ತರದಲ್ಲಿ ಅಗತ್ಯವಾದ ಹಣ ಎಂದು ಹೇಳಿದ್ದೀರಿ. ಆ ರೀತಿ ಹೇಳಿದರೆ ಹಣ ಇದೆ ಎಂತಲೋ ಅಥವಾ ಹಣ ಇಲ್ಲ ಎಂದು ಅರ್ಥವೋ?

ಶ್ರೀ ಎ. ಲಕ್ಷ್ಮೀಸಾಗರ್.—ಹಣದ ತೊಂದರೆ ಇದೆ. ಇನ್ನು ಗುರುತ್ವಾಕರ್ಷಣೆ ಎಂದರೆ ಗ್ರಾವಿಟೇಷನ್.

ಶ್ರೀ ಬಿ. ಸ್ವಾಮಿರಾವ್.—ಈ ಕೆಲಸವನ್ನು ಯಾವಾಗ ಪೂರೈಸುತ್ತೀರಿ?